

# ಬಂಗುಡೆಯಾದವನು!

■ ಗೌರಿ

'ಬಂಗುಡೆ' ಇತ್ತೀಚೆಗೆ ಕನ್ನಡದಲ್ಲಿ ಬಂದಿರುವ ಉತ್ತಮ ಕಿರುಚಿತ್ರಗಳಲ್ಲಿ ಒಂದು ಎಂದು ನಿಸ್ಸಂಶಯವಾಗಿ ಹೇಳಬಹುದು. ಮಾಧ್ಯಮದ ಮೇಲೆ ಹಿಡಿತ, ಯಾವುದನ್ನು ಹೇಳಬೇಕು, ಎಷ್ಟು ಹೇಳಬೇಕು, ಹಾಗೆ ಹೇಳುವಷ್ಟೇ ಹೇಳುವುದರ ಮೂಲಕವೇ ಹೇಳದಿರುವುದನ್ನು ಹೇಗೆ ಧ್ವನಿಸುವಂತೆ ಮಾಡಬೇಕು, ಕತೆಯ ರೋಚಕತೆಗಿಂತ ಕಥನದ ಅಂತರ್‌ಸಾಧ್ಯತೆಗಳನ್ನು ದೃಶ್ಯಮಾಧ್ಯಮದಲ್ಲಿ ಹೇಗೆ ಅನಾವರಣಗೊಳಿಸಬೇಕು ಎಂಬ ಎಲ್ಲ ವಿಷಯದಲ್ಲಿಯೂ ಈ ಕಿರುಚಿತ್ರ ಗಮನಸೆಳೆಯುತ್ತದೆ.

ಈ ನಿರ್ದೇಶಕರಿಗೆ ಕಿರುಚಿತ್ರ ಎನ್ನುವುದು ತನ್ನ ಪ್ರತಿಭೆಯನ್ನು ತೋರಿಸುವ ಸಾಧನವಷ್ಟೇ ಅಲ್ಲ; ಇದು ಅವರ ಅಭಿವ್ಯಕ್ತಿಯ ಮಾಧ್ಯಮ, ತೀವ್ರವಾಗಿ ಕಾಡಿರುವುದನ್ನು ಅಷ್ಟೇ ತೀವ್ರವಾಗಿ ವ್ಯಕ್ತಪಡಿಸುವ ದಾರಿ ಮತ್ತು ಹಾಗೆ ವ್ಯಕ್ತಪಡಿಸುತ್ತಲೇ ಆ ಘಟನೆಯನ್ನೂ ಮೀರಿ ಮನುಷ್ಯನ ಬದುಕಿನ ಪಾಡನ್ನು, ಅವನು ಬದುಕುವ ಕುಟುಂಬ, ಸಮಾಜ ವ್ಯವಸ್ಥೆಗಳ ಕ್ರೌರ್ಯಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವೂ ಹೌದು.

ಮನುಷ್ಯನ ಅಂತರಂಗದ ತೊಳಲಾಟ, ಪ್ರಕ್ಷುಬ್ಧತೆ, ಕುದಿತನ ಎಲ್ಲವೂ ಅವನ ನಡವಳಿಕೆಯಲ್ಲಿಯೂ ಸೂಕ್ಷ್ಮವಾಗಿ ವ್ಯಕ್ತವಾಗುತ್ತಿರುತ್ತದೆ, ಅವನ ದಿನಚರಿಯ ಚಟುವಟಿಕೆಗಳು ಆ ಮನಸ್ಸಿನೊಳಗನ್ನು ವ್ಯಕ್ತಪಡಿಸುತ್ತಿರುತ್ತವೆ ಎಂಬ ನಂಬಿಕೆಯಲ್ಲಿಯೇ ಇಲ್ಲಿನ ಪಾತ್ರಗಳು ಜೀವತಳೆದಿವೆ.

ಇಲ್ಲಿನ ಪಾತ್ರಗಳಿಗೆ ಹೆಸರಿಲ್ಲ ಅಥವಾ ಹೆಸರು ನಮಗೆ ತಿಳಿಯುವುದಿಲ್ಲ. ಅದು ಅಗತ್ಯವೆಂತಲೂ ಅನಿಸುವುದಿಲ್ಲ. ಈ ಕಥನದ ಕೇಂದ್ರದಲ್ಲಿರುವವನು ನಿಧಾನಕ್ಕೆ ಮಧ್ಯವಯಸ್ಸಿಗೆ ಬೀಳುತ್ತಿರುವ ವ್ಯಕ್ತಿ. ಮನೆಯಲ್ಲಿಯೂ ಊರಲ್ಲಿಯೂ ನಿರುಪಯುಕ್ತ ಅನಿಸಿಕೊಳ್ಳುತ್ತಿರುವವ. ಅವನ ತಮ್ಮ ಅಂಗಡಿಯಿಟ್ಟು ಕುಟುಂಬವನ್ನು ತೂಗಿಸಿಕೊಂಡು ಹೋಗುತ್ತಿರುವವ. ಹಾಗಾಗಿಯೇ ಆ ಕುಟುಂಬದಲ್ಲಿ 'ಪವರ್' ಇರುವುದು ಅವನ ಕೈಯಲ್ಲಿ. ಯಾವ ಕೆಲಸಕ್ಕೂ ಬರದ, ಇಡೀ ದಿನ ಒಬ್ಬನೇ ಬ್ರಿಡ್ಜಿನ ಮೇಲೆ ಮೀನು ಹಿಡಿಯಲು ಯತ್ನಿಸುತ್ತ ಕಾಲ ಕಳೆಯುವ, ಯಾವ ಲಾಭವನ್ನೂ ತಂದುಕೊಡದ ಅಣ್ಣನ ಬಗ್ಗೆ ಅವನಿಗೆ ಜಿಗುಪ್ಸೆ ಇದೆ. ಇಂಥ ಕುಟುಂಬವನ್ನು ಪೊರೆಯುವುದರಲ್ಲಿಯೇ ತನ್ನ ಬದುಕು ಸವೆದುಹೋಗುತ್ತಿರುವುದರ ಬಗ್ಗೆ ರೇಜಿಗೆ ಇದೆ. ಅವೆಲ್ಲವೂ ಅವನ ವರ್ತನೆಯಲ್ಲಿಯೇ ವ್ಯಕ್ತವಾಗುತ್ತವೆ.

ಬರೀ ತಮ್ಮನ ಕಣ್ಣಿನಲ್ಲಷ್ಟೇ ಅಲ್ಲ, ಇಡೀ ಊರಿನ ಕಣ್ಣಿನಲ್ಲಿಯೇ ಅಣ್ಣ ಯಾವ ಒಳ್ಳೆಯದಕ್ಕೂ ಅರ್ಹನಲ್ಲ. ಅವನು ಅಯೋಗ್ಯನಾಗಿರುವುದಕ್ಕಷ್ಟೇ ಅರ್ಹ. ಹಾಗಾಗಿಯೇ ಅವನು ಮೀನು ಹಿಡಿಯುವಾಗ ಗಾಳಕ್ಕೆ ಒಂದು ಬೀಗ ಹಾಕಿದ ಪುಟ್ಟ ಪೆಟ್ಟಿಗೆ ಸಿಕ್ಕಿಕೊಂಡು ಬಂದಾಗ, ಅಲ್ಲಿಯೇ ಅದನ್ನು ನೋಡುತ್ತಿದ್ದ ಹುಡುಗರು ಅಧಿಕಾರದಿಂದ ಕಸಿಯಲು ಬರುತ್ತಾರೆ. ಆದರೆ ಒಳಗೆ ಏನಿದೆ ಎಂತಲೇ ಗೊತ್ತಿಲ್ಲದ ಅಣ್ಣನಿಗೆ ಅದು ನಿಧಿಯೇ ಇರಬೇಕು ಎಂದು ಅನಿಸಿ ತನ್ನ ಇಡೀ ಜೀವನ ಉಪಯುಕ್ತ ಎಂದು ಸಾಬೀತುಮಾಡಲು ಸಿಕ್ಕ ಅಪೂರ್ವ ಅವಕಾಶವಾಗಿ ಕಾಣಿಸುತ್ತದೆ. ತನ್ನನ್ನು ಬೆನ್ನತ್ತಿ ಬರುತ್ತಿರುವ ಹುಡುಗರಿಂದ ದೂರಕ್ಕೆ ಸೈಕಲ್ ತುಳಿಯುವ ಅವನ ಮುಖದಲ್ಲಿನ ಆ ಗೆಲುವು ಏನೆಲ್ಲವನ್ನೂ ಹೇಳುವಂತಿದೆ. ಆದರೆ ಆ ಊರಿನ ಕ್ರೌರ್ಯ, ಒಂದು ಖಾಲಿ ಡಬ್ಬಿಗಾಗಿ ಅವನನ್ನೇ ಬಲಿತೆಗೆದುಕೊಳ್ಳುವಷ್ಟು ಶಕ್ತಿಯುತವಾಗಿದೆ. ತಾನು ಹಾಕಿದ ಗಾಳದ ಮುಳ್ಳನ್ನು ತಾನೇ ನುಂಗಿ ಮಲಗಿರುವಂತೆ ಕಾಣಿಸುವ ಅವನ ಚಿತ್ರ ಬಹಳ ಸಂಗತಿಗಳನ್ನು ದಾಟಿಸುವಂತಿದೆ.

ಇಡೀ ಚಿತ್ರದ ನಡಿಗೆಗೆ ಒಂದು ಹರಿತ ವ್ಯಂಗ್ಯವನ್ನು ಲೇಪಿಸುವ ಪ್ರಯತ್ನವನ್ನು ಚಿತ್ರದ ಹಿನ್ನೆಲೆ ಸಂಗೀತ ಮಾಡಿದೆ ಮತ್ತು ಅದು ಈ ಚಿತ್ರಕ್ಕೆ ಬೇರೆಯದೇ ಬಣ್ಣವನ್ನೂ ಕೊಟ್ಟಿದೆ. ಸುವಿನ್ ಶೆಟ್ಟಿ ಅವನ ತೀವ್ರವಾದ ಅಭಿನಯ ಅದನ್ನು ಅಷ್ಟೇ ತೀವ್ರವಾಗಿ ಸೆರೆಹಿಡಿದಿರುವ ಶ್ರೀಹರಿ ಬಳ್ಳೂರು ಅವರ ಕ್ಯಾಮೆರಾ ಎರಡೂ ಈ ಚಿತ್ರವನ್ನು ಇನ್ನಷ್ಟು ಎತ್ತರಕ್ಕೆ ಎತ್ತಿವೆ. ಖಂಡಿತವಾಗಿ ಇದು ಕನ್ನಡ ಚಿತ್ರರಂಗ ಭರವಸೆಯ ಕಣ್ಣಿನಿಂದ ನೋಡಬಹುದಾದ ಪ್ರಯತ್ನ.



**ಸಿನಿಮಾ:** ಬಂಗುಡೆ (ಕನ್ನಡ)
**ನಿರ್ದೇಶನ:** ಅರ್ಜುನ್ ಆಚಾರ್ಯ
**ನಿರ್ಮಾಣ:** ಪಿಕ್ಚರ್ ಫ್ರೇಮ್ ಪ್ರೊಡಕ್ಷನ್
**ತಾರಾಗಣ:** ಶ್ರೀಹರಿ ಬಳ್ಳೂರು
**ತಾರಾಗಣ:** ಸುವಿನ್ ಶೆಟ್ಟಿ, ಶ್ರವಣ್ ಪಾಲ್, ವಿವೇಕ್ ಆಚಾರ್ಯ, ರೋಶನ್ ಶೆಟ್ಟಿ

ಈ ಕಿರುಚಿತ್ರ ವೀಕ್ಷಣೆಗೆ https://bit.ly/3TriGIT ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.